ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1997.

# *ತಮ್ಮ ಚಹರೆಯಿಂದ ತಂದೆಯ ಲಕ್ಷಣಗಳನ್ನು ಪ್ರತ್ಯಕ್ಷ ಮಾಡಿ ಆಗ ಪ್ರತ್ಯಕ್ಷತೆಯ ನಗಾರಿ ಮೊಳಗುವುದು.*

(अपनी सूरत से बाप की सीरत को प्रत्यक्ष करो तब प्रत्यक्षता का नगाड़ा बजेगा)

ಇಂದು ಬಾಪ್‌ದಾದಾರವರು ಎರಡು ವಿಶಾಲ ಸಭೆಗಳನ್ನು ನೋಡುತ್ತಿದ್ದಾರೆ. ಒಂದು ಸಾಕಾರ ರೂಪದಲ್ಲಿ ನೀವೆಲ್ಲರೂ ಸಮ್ಮುಖದಲ್ಲಿ ಇದ್ದೀರಿ, ಹಾಗೂ ಅವ್ಯಕ್ತ ರೂಪದಲ್ಲಿ ತಂದೆಯ ಸಮ್ಮುಖದಲ್ಲಿ ಕುಳಿತು ನೋಡುತ್ತಿದ್ದೀರಿ. ಕೇಳುತ್ತಿದ್ದೀರಿ ಎರಡು ಸಭೆಗಳು ಒಂದಕ್ಕಿಂತ ಒಂದು ಪ್ರಿಯವಾದವುಗಳು. ಇಂದು ವಿಶೇಷವಾಗಿ ಎಲ್ಲರ ಮನಸ್ಸಿನಲ್ಲಿ ಬ್ರಹ್ಮಾ ತಂದೆಯ ಸ್ಮೃತಿ, ತುಂಬಿದೆ ಏಕೆಂದರೆ ಬ್ರಹ್ಮ ಬಾಬಾರವರಿಗೆ ಈ ಡ್ರಾಮಾದಲ್ಲಿ ವಿಶೇಷವಾದ ಪಾತ್ರವಿದೆ. ಬ್ರಹ್ಮಾತಂದೆಯೊಂದಿಗೆ ಎಲ್ಲರಿಗೂ ವಿಶೇಷ ಸ್ನೇಹವಿದೆ ಏಕೆಂದರೆ ಬ್ರಹ್ಮಾತಂದೆಗೂ ಸಹ ಒಂದೊಂದು ಮಗುವಿನೊಂದಿಗೂ ಅತಿಯಾದ ಪ್ರೀತಿ ಇದೆ. ನೀವೆಲ್ಲರೂ ಸಾಕಾರದಲ್ಲಿ ಬ್ರಹ್ಮಾ ತಂದೆಯ ಗುಣ ಹಾಗೂ ಕರ್ತವ್ಯವನ್ನು ಹೇಗಾದರೆ ನೆನಪು ಮಾಡುತ್ತೀರೋ ಅದೇ ರೀತಿ ಬ್ರಹ್ಮಾ ತಂದೆಯು ಸಹ ಮಕ್ಕಳಾದ ನಿಮ್ಮ ವಿಶೇಷತೆಗಳ, ಸೇವೆಯ ಗುಣಗಾಯನ ಮಾಡುತ್ತಾರೆ. ಬ್ರಹ್ಮಾರವರ ಅವ್ಯಕ್ತ ಧ್ವನಿ ನಿಮ್ಮೆಲ್ಲರ ಬಳಿ ತಲುಪುತ್ತಿದೆಯೇ? ನೀವೆಲ್ಲರೂ ವಿಶೇಷವಾಗಿ ಅಮೃತವೇಳೆಯಿಂದ ಹಿಡಿದು ಯಾವ ಮಧುರ ಮಧುರ ಮಾತುಗಳನ್ನು ಆಡುತ್ತೀರಿ ಅಥವಾ ಮಧುರ ಮಧುರ ದೂರುಗಳನ್ನೂ ಕೊಡುತ್ತೀರೋ ಅವುಗಳನ್ನು ಕೇಳಿ ಬ್ರಹ್ಮಾ ಬಾಬಾರವರು ಮುಗುಳ್ನಗುತ್ತಾರೆ ಹಾಗೂ ಯಾವ ಗುಣಗಾನವನ್ನು ಮಾಡುತ್ತಾರೆ? ವಾಹ್ ನನ್ನ ಅಗಲಿ ಹೋಗಿ ಮರಳಿ ಸಿಕ್ಕಿರುವ, ಮುದ್ದು ತಂದೆಯನ್ನು ಪ್ರತ್ಯಕ್ಷ ಮಾಡುವಂತಹ ಮಕ್ಕಳೇ ವಾಹ್!. ಬ್ರಹ್ಮಾತಂದೆ ಮಕ್ಕಳಾದ ನಿಮ್ಮಿಂದ ಯಾವ ಶುಭ ಆಸೆಗಳನ್ನು ಇಟ್ಟುಕೊಂಡಿದ್ದಾರೆಯೋ ಅದನ್ನು ತಿಳಿದುಕೊಂಡಿರುವಿರೇ?

ತಂದೆಯು ಇದನ್ನೇ ಬಯಸುತ್ತಾರೆ- ನನ್ನ ಪ್ರತಿಯೊಂದು ಮಗುವು ತನ್ನ ಚಹರೆಯಿಂದ ತಂದೆಯ ಲಕ್ಷಣಗಳನ್ನು ತೋರಿಸಬೇಕು. ಭಿನ್ನ-ಭಿನ್ನ ಚಹರೆಯಿರಲಿ, ಆದರೆ ಎಲ್ಲರ ಚಹರೆಯಿಂದ ತಂದೆಯ ಲಕ್ಷಣಗಳು ಕಾಣಿಸಬೇಕು. ಯಾರೇ ನೋಡಿದರೂ, ಯಾರೇ ಸಂಬಂಧ ಸಂಪರ್ಕದಲ್ಲಿ ಬಂದರೂ- ಅವರು ನಿಮ್ಮನ್ನು ಮರೆತು ಹೋಗಬೇಕು ಆದರೆ ನಿಮ್ಮಲ್ಲಿ ತಂದೆ ಕಾಣಿಸಬೇಕು ಆಗಲೇ ಸಮಯದ ಸಮಾಪ್ತಿಯಾಗುವುದು. **ಎಲ್ಲರ ಹೃದಯದಲ್ಲಿ ನನ್ನ ಬಾಬಾ ಬಂದುಬಿಟ್ಟಿದ್ದಾರೆ, ನನ್ನ ಬಾಬಾ ಎಂಬ ಶಬ್ದ ಮೊಳಗಬೇಕು. ಬ್ರಹ್ಮಾಕುಮಾರಿಯರ ಬಾಬಾ ಅಲ್ಲ, ನನ್ನ ಬಾಬಾ. ಯಾವಾಗ ಎಲ್ಲರ ಹೃದಯದಿಂದ "ನನ್ನ ಬಾಬಾ" ಎಂಬ ಕೂಗು ಹೊರಬರುತ್ತದೆಯೋ ಆಗಲೇ ಈ ಕೂಗು ನಾಲ್ಕಾರು ಕಡೆ ನಗಾರಿಯಂತೆ ಮೊಳಗುವುದು. ಏನೆಲ್ಲಾ ವಿಜ್ಞಾನದ ಸಾಧನೆಗಳು ಇವೆಯೋ ಆ ಸಾಧನಗಳಲ್ಲಿ ಈ ನಗಾರಿ ಮೊಳಗುತ್ತಿರುತ್ತದೆ- ನನ್ನ ಬಾಬಾ**

**ಬಂದುಬಿಟ್ಟಿದ್ದಾರೆ. ಈಗ ಏನೆಲ್ಲಾ ಮಾಡುತ್ತಿದ್ದೀರಿ, ಬಹಳ ಚೆನ್ನಾಗಿ ಮಾಡಿದ್ದೀರಿ ಹಾಗೂ ಮಾಡುತ್ತಿದ್ದೀರಿ. ಆದರೆ ಈಗ ಎಲ್ಲರೂ ಒಟ್ಟಿಗೆ ನಗಾರಿಯನ್ನು ಬಾರಿಸಬೇಕು ಎಲ್ಲಿ ಕೇಳಿದರೂ ಅಲ್ಲಿ ಒಂದೇ ಕೂಗು ಕೇಳುತ್ತಿರಬೇಕು. ಬರುವವರು ಬಂದುಬಿಟ್ಟಿದ್ದಾರೆ- ಇದನ್ನೇ ತಂದೆಯ ಸ್ಪಷ್ಟ ಪ್ರತ್ಯಕ್ಷತೆ ಎಂದು ಕರೆಯಲಾಗುತ್ತದೆ. ಈಗ ಹೆಸರು ಪ್ರತ್ಯಕ್ಷವಾಗಿದೆ. ಮೊದಲನೆಯ ಹೆಜ್ಜೆ, ಹೆಸರು ಪ್ರತ್ಯಕ್ಷವಾಗಿದೆ- ಬ್ರಹ್ಮಾಕುಮಾರ ಕುಮಾರಿಯರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ವಿದ್ಯಾಲಯದ ಹಾಗೂ ಕಾರ್ಯದ, ಜ್ಞಾನದ ಮಹಿಮೆಯನ್ನು ಮಾಡುತ್ತಿದ್ದಾರೆ, ಖುಷಿಪಡುತ್ತಾರೆ. ಇದನ್ನು ತಿಳಿದುಕೊಳ್ಳುತ್ತಾರೆ- ಇಂತಹ ಕಾರ್ಯವನ್ನು ಬೇರೆ ಯಾರು ಮಾಡಲು ಸಾಧ್ಯವಿಲ್ಲ, ಇಲ್ಲಿಯವರೆಗೂ ತಲುಪಿದ್ದಾರೆ. ಈ ಮಾತು ಸ್ಪಷ್ಟವಾಗಿದೆ, ನಾಲ್ಕಾರು ಕಡೆ ಈ ಮಾತಿನ ಮಹಿಮೆ ಇದೆ. ಆದರೆ ಬಾಪ್‌ದಾದರವರು ಬಂದುಬಿಟ್ಟಿದ್ದಾರೆ ಎಂಬ ಸ್ಪಷ್ಟೀಕರಣ ಇನ್ನು ಆಗಲಿಲ್ಲ.** ಈಗ ಸ್ವಲ್ಪ ಸ್ವಲ್ಪ ಪರದೆ ತೆರೆಯುತ್ತದೆ ಆದರೆ ಇನ್ನು ಸ್ಪಷ್ಟವಾಗಿಲ್ಲ. ತಿಳಿದುಕೊಂಡಿದ್ದಾರೆ ಇವರಿಗೆ ಬೆನ್ನೆಲುಬಾಗಿ ಯಾರೋ ಅಥಾರಿಟಿ ಇದ್ದಾರೆ ಎಂದು ಆದರೆ ಅವರು ಬಾಪ್‌ದಾದಾರವರಾಗಿದ್ದಾರೆ ಅವರಿಂದ ನಾವು ಸಹ ಆಸ್ತಿಯನ್ನು (ವಾರಸತ್ವ) ತೆಗೆದುಕೊಳ್ಳಬೇಕು, ಎಂಬ ಉತ್ಸಾಹ-ಉಲ್ಲಾಸ ಈಗ ಬರಬೇಕು. ಈಗ ಇದು ಆಗಬೇಕು. ಒಂದು ಹೆಜ್ಜೆಯನ್ನು ಇಡುತ್ತಿದ್ದಾರೆ, ಮೊದಲನೆಯ ಹೆಜ್ಜೆಯಾಗಿದೆ- ಸಹಯೋಗದ ಹೆಜ್ಜೆ. ಒಂದು ಹೆಜ್ಜೆಯನ್ನು ಮುಂದಿಟ್ಟಿದ್ದಾರೆ, ಸಹಯೋಗ ಕೊಡುವ ಪ್ರೇರಣೆ ಆಂತರ್ಯದಲ್ಲಿ ಬರುತ್ತಿದೆ, ಈಗ ಎರಡನೆಯ ಹೆಜ್ಜೆಯಾಗಿದೆ- ಸ್ವಯಂ ಆಸ್ತಿಯನ್ನು ತೆಗೆದುಕೊಳ್ಳುವ ಉತ್ಸಾಹದಿಂದ ಬರಬೇಕು. ಯಾವಾಗ ಈ ಎರಡು ಹೆಜ್ಜೆಗಳು ಸೇರುತ್ತವೆಯೋ ಆಗ ನಾಲ್ಕಾರು ಕಡೆ ನಗಾರಿಗಳು ಮೊಳಗುತ್ತದೆ. ಯಾವ ನಗಾರಿ?- ನನ್ನ ಬಾಬಾ. ನಿನ್ನ ಬಾಬಾ ಅಲ್ಲ, ನನ್ನ ಬಾಬಾ. ಹೇಗಾದರೆ ಕಾರ್ಯದ ಮಹಿಮೆಯನ್ನು ಮಾಡುತ್ತಾರೆಯೋ, ಅದೇ ರೀತಿ ಮಾಡಿ ಮಾಡಿಸುವಂತಹ ತಂದೆಯ ಮಹಿಮೆ ನಲಿದಾಡುತ್ತಾ ಹಾಡುತ್ತಾರೆ. ಇದಂತೂ ಮುಂದೆ ಪ್ರತ್ಯಕ್ಷವಾಗಿ ನಡೆಯುವಂತಹ ಮಾತೇ ಆಗಿದೆ. ನಿಮಗೂ ಸಹ ಈ ದೃಶ್ಯ ಕಣ್ಣುಗಳ ಮುಂದೆ ಹೃದಯದಲ್ಲಿ, ಬುದ್ಧಿಯಲ್ಲಿ ಬರುತ್ತಿದೆಯಲ್ಲವೇ! ಏಕೆಂದರೆ ತಂದೆ ಹಾಗೂ ದಾದಾ ಬಂದಿದ್ದಾರೆ- ಎಲ್ಲಾ ಮಕ್ಕಳಿಗೂ ವಾರಸತ್ವವನ್ನು ಕೊಡುವುದಕ್ಕಾಗಿ. ಮುಕ್ತಿಯದಾಗಿರಲಿ, ಅಥವಾ ಜೀವನ್ ಮುಕ್ತಿಯದಾಗಿರಲಿ ಎಲ್ಲರಿಗೂ ಆಸ್ತಿ ಅಂತೂ ಅವಶ್ಯವಾಗಿ ಸಿಗಲೇಬೇಕು. ಯಾರು ಸಹ ಇದರಿಂದ ವಂಚಿತರಾಗುವುದಿಲ್ಲ ಏಕೆಂದರೆ ತಂದೆ ಬೇಹದ್ ಮಾಲೀಕರಾಗಿದ್ದಾರೆ, ಬೇಹದ್ದಿನ ತಂದೆಯಾಗಿದ್ದಾರೆ. ಅಂದ ಮೇಲೆ ಬೇಹದ್ದಿನ ಆಸ್ತಿ ಸಿಗಲೇಬೇಕು. ಭಲೆ ಯೋಗ ಬಲದಿಂದ ತಮ್ಮ ಜನ್ಮಜನ್ಮಾಂತರದ ಪಾಪವನ್ನು ಭಸ್ಮ ಮಾಡದೇ ಇದ್ದರೂ ಸಹ ಕೇವಲ ತಂದೆ ಬಂದಿದ್ದಾರೆ ಎಂದು ಅರಿತು ಕೊಳ್ಳುವುದರಿಂದಲೂ ವಾರಸತ್ವದ ಅಧಿಕಾರಿಯಂತೂ ಆಗುತ್ತಾರೆ. ಹೇಗೆ ತಂದೆಗೆ ಬೇಹದ್(ಅಪರಿಮಿತ) ವಾರಸತ್ವವನ್ನು ಕೊಡುವ ಸಂಕಲ್ಪವಿದೆ ಹಾಗೂ ನಿಶ್ಚಿತವಾಗಿ ಇದು ಆಗಲೇ ಬೇಕಾಗಿದೆ. ಇದೇ ರೀತಿ ನಮ್ಮ ಎಲ್ಲಾ ಸಹೋದರ ಸಹೋದರಿಯರು ಬೇಹದ್ ವಾರಸತ್ವಕ್ಕೆ ಅಧಿಕಾರಿಯಾಗಿ ಬಿಡಬೇಕು ಎಂದು ನಿಮ್ಮೆಲ್ಲರಿಗೂ ಸಹ ಹೃದಯದಲ್ಲಿ ಶುಭ ಭಾವನೆ, ಶುಭಕಾಮನೆ ಉತ್ಪತ್ತಿಯಾಗುತ್ತದೆಯಲ್ಲವೇ? ಈ ಶುಭ ಭಾವನೆ ಹಾಗೂ ಶುಭಕಾಮನೆಯನ್ನು ಯಾವಾಗ ಪ್ರತ್ಯಕ್ಷ ರೂಪದಲ್ಲಿ ತರುವಿರಿ? ಅದರ ದಿನಾಂಕವನ್ನು ಮೊದಲು ತಮ್ಮ ಹೃದಯದಲ್ಲಿ ನಿಗಧಿ ಮಾಡಿಕೊಳ್ಳಿ, ಸಂಘಟನೆಗಿಂತ ಮೊದಲು ಹೃದಯದಲ್ಲಿ ಮಾಡಿ ನಂತರ ಸಂಘಟನೆಯಲ್ಲಿ ಮಾಡಿ ಆಗ ವಿನಾಶದ ಬಾಗಿಲು ಸ್ವತಹವಾಗಿಯೇ ಸ್ಪಷ್ಟವಾಗುವುದು, ಅದರ ಚಿಂತೆ ಮಾಡಬೇಡಿರಿ. ದಯೆ ಬರುತ್ತದೆಯೇ ಅಥವಾ ನಾವಂತೂ ಅಧಿಕಾರಿ ಆಗಿಬಿಟ್ಟಿದ್ದೇವೆ ಎಂಬ

ಮೋಜಿನಲ್ಲಿ ಇರುತ್ತೀರಾ? ಮೋಜಿನಲ್ಲಿ ಇರಿ, ಇದಂತೂ ಬಹಳ ಒಳ್ಳೆಯದಾಗಿದೆ, ಆದರೆ ದಯಾಹೃದಯಿಯಾದ ತಂದೆಯ ಮಕ್ಕಳಾದ ಕಾರಣ ಈಗ ಅನ್ಯರ ಮೇಲೆಯೂ ದಯೆ ತೋರಿಸಿ. ಯಾವಾಗ ಅನ್ಯರ ಮೇಲೆ ದಯೆ ತೋರಿಸುತ್ತಿರೋ ಆಗ ಸ್ವಯಂನ ಮೇಲೆ ಮೊದಲು ದಯೆ ಬರುತ್ತದೆ. ನಂತರ ಕೇವಲ ಯಾವ ಒಂದೇ ಚಿಕ್ಕ ವಿಷಯನ ಮೇಲೆ ನೀವು ಪುರುಷಾರ್ಥ ಮಾಡಬೇಕಾಗುತ್ತಿದೆಯೋ, ಅದರ ಅವಶ್ಯಕತೆ ಇರುವುದಿಲ್ಲ. ಮಾಸ್ಟರ್ ದಯಾಹೃದಯ, (ಮಾಸ್ಟರ್ ದಯಾಳು,ಮರ್ಸಿ ಫುಲ್) ಆಗಿಬಿಡಿ. ಈ ಗುಣವನ್ನು ಪ್ರತ್ಯಕ್ಷ ಮಾಡಿ. ಅನ್ಯರ ಮೇಲೆ ದಯೆ ತೋರುವುದರಿಂದ ಸ್ವಯಂನ ಮೇಲೆ ಸ್ವತಹವಾಗಿಯೇ ದಯೆ ಬರುವುದು.

ಬಾಪ್‌ದಾದರವರು ಮೊದಲು ಸಹ ತಿಳಿಸಿದ್ದರು- ಬಾಪ್‌ದಾದಾರವರಿಗೆ ಮಕ್ಕಳ ಯಾವ ಮಾತು ಇಷ್ಟವಾಗುವುದಿಲ್ಲ? ತಿಳಿದುಕೊಂಡಿದ್ದೀರಾ? ಬಾಪ್‌ದಾದರವರಿಗೆ ಮಕ್ಕಳು ಪರಿಶ್ರಮ ಪಡುವುದು ಹಾಗೂ ಮತ್ತೆ ಯುದ್ಧ ಮಾಡುವುದು, ಇದು ಇಷ್ಟವಾಗುವುದಿಲ್ಲ. ಬಾಬಾರವರು ಹೇಳುತ್ತಾರೆ- ಹೇ ನನ್ನ ಯೋಗಿ ಮಕ್ಕಳೇ, ಯೋಧ ಮಕ್ಕಳೇ ಎಂದು ಹೇಳುವುದಿಲ್ಲ, ಯೋಗಿ ಮಗು ಎಂದು ಹೇಳುತ್ತಾರೆ. ಯೋಗಿ ಮಕ್ಕಳ ಕೆಲಸವೇನಾಗಿದೆ? ಯುದ್ಧ ಮಾಡುವುದೇ? ಯುದ್ಧ ಮಾಡುವುದು ಇಷ್ಟವಾಗುತ್ತದೆಯೇ? ಸುಸ್ತಾಗುತ್ತೀರಿ ಆದರೂ ಸಹ ಮತ್ತೆ ಯುದ್ಧ ಮಾಡುತ್ತೀರಿ. ಇಂದು ಪ್ರತಿಜ್ಞೆ ಮಾಡುತ್ತೀರಿ- ಯುದ್ಧ ಮಾಡುವುದಿಲ್ಲ ಎಂದು ಮತ್ತು ಸ್ವಲ್ಪ ಸಮಯದ ನಂತರ ಮತ್ತೆ ಯೋಗಿಯ ಬದಲಾಗಿ ಯೋಧರಾಗುತ್ತೀರಿ. ಈ ರೀತಿ ಏಕೆ ಮಾಡುತ್ತೀರಿ? ಬಾಪ್‌ದಾದಾರವರು ತಿಳಿಯುತ್ತಾರೆ- ಮಕ್ಕಳಿಗೆ ಯೋಗದೊಂದಿಗೆ ಪ್ರೀತಿ ಕಡಿಮೆ ಇದೆ. ಯುದ್ಧದೊಂದಿಗೆ ಪ್ರೀತಿ ಜಾಸ್ತಿ ಇದೆ. ಹಾಗಾದರೆ ಇಂದಿನಿಂದ ಏನು ಮಾಡುವಿರಿ? ಯೋಧರಾಗುತ್ತೀರಾ ಅಥವಾ ನಿರಂತರ ಯೋಗಿಯಾಗುತ್ತೀರಾ?

ಬಾಪ್‌ದಾದಾರವರು ನೋಡಿದರು- ಎಷ್ಟೊಂದು 18 ಜನವರಿ ಕಳೆದವು! ಹಾಗೂ ವಿಶೇಷ ಬ್ರಹ್ಮಾ ತಂದೆಯು ಮಕ್ಕಳಾದ ನಿಮ್ಮನ್ನು ಆಹ್ವಾನ ಮಾಡುತ್ತಿದ್ದಾರೆ- ಸಮಾನರಾಗಿ ವತನದಲ್ಲಿ ಬಂದುಬಿಡಿ ಎಂದು. ವತನ ಇಷ್ಟವಾಗುವುದಿಲ್ಲವೇ? ಯುದ್ಧ ಮಾಡುವುದೇ ಇಷ್ಟವಾಗುತ್ತದೆಯೇ? ಯುದ್ಧ ಮಾಡಬೇಡಿ. ಇಂದಿನಿಂದ ಯುದ್ಧ ಮಾಡುವುದನ್ನು ನಿಲ್ಲಿಸಿ. ಮಾಡಲು ಸಾಧ್ಯವೇ. ಉತ್ತರ ಕೊಡಿ. ಮತ್ತೆ ಅಲ್ಲಿ ಹೋಗಿ ಪತ್ರವನ್ನು ಬರೆಯಬೇಡಿ ಮಾಯೆ ಬಂದುಬಿಟ್ಟಿತು, ಯುದ್ಧ ಮಾಡಿ ಮಾಯೆಯನ್ನು ಓಡಿಸಿದೆವು ಎಂದು. ಕೆಲವರಿಗೆ ಮಾಯೆ ಬರುತ್ತದೆ ಇನ್ನು ಕೆಲವರಿಗೆ ಅನ್ಯರ ಮಾಯೆಯನ್ನು ನೋಡಿ ಸ್ವಯಂ ಮಾಯೆಯ ಪ್ರಭಾವದಲ್ಲಿ ಬಂದುಬಿಡುತ್ತಾರೆ. ಒಂದು ವೇಳೆ ಏಕೆ, ಏನು ಎನ್ನುವ ಪ್ರಶ್ನೆಗಳಲ್ಲಿ ಬಂದುಬಿಟ್ಟರೆ ತಮ್ಮ ಮಾಯೆಯು ಸಮಾಪ್ತಿ ಆಗುವುದಿಲ್ಲ, ಬೇರೆಯವರ ಮಾಯೆಯೂ ಸಮಾಪ್ತಿ ಆಗುವುದಿಲ್ಲ. ಆದ್ದರಿಂದ ಹೇಗೆ ಹೊಸ ವರ್ಷದಲ್ಲಿ ಹಳೆಯ ವರ್ಷಕ್ಕೆ ಬೀಳ್ಕೊಡುಗೆ ಕೊಡುತ್ತೀರೋ ಹಾಗೆಯೇ ಈಗ 96 ಎನ್ನುವುದಿಲ್ಲ, 97 ಎಂದು ಹೇಳುತ್ತಾರೆ ಅಲ್ಲವೇ! ಒಂದು ವೇಳೆ ಯಾರಾದರೂ ತಪ್ಪಾಗಿ ಹೇಳಿದರು ಸಹ ನೀವು ಹೇಳುತ್ತೀರಿ 96 ಅಲ್ಲ, 97 ಆಗಿದೆ ಎಂದು. ಇದೇ ರೀತಿ ಇಂದು ಏಕೆ- ಏನು, ಹೀಗೆ- ಹಾಗೆ ಇಂತಹ ಶಬ್ದಗಳಿಗೆ ಬೀಳ್ಕೊಡುಗೆ ಕೊಟ್ಟುಬಿಡಿ. ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಬೇಡಿ. ಬಿಂದುವನ್ನು ಇಡಿ, ಕ್ವೆಶ್ಚನ್ ಮಾರ್ಕ್ ಶುರುವಾದರೆ ವ್ಯರ್ಥದ ಖಾತೆ ಪ್ರಾರಂಭವಾಯಿತು ಎಂದು ಅರ್ಥ. ಹಾಗೂ ಯಾವಾಗ ವ್ಯರ್ಥದ ಖಾತೆ ಆರಂಭವಾಗುತ್ತದೆಯೋ ಆಗ ಸಮರ್ಥತೆ ಸಮಾಪ್ತಿಯಾಗಿ ಹೋಗುತ್ತದೆ.

ಹಾಗೂ ಎಲ್ಲಿ ಸಮರ್ಥತೆ ಸಮಾಪ್ತಿಯಾಗುತ್ತದೆಯೋ ಅಲ್ಲಿ ಮಾಯೆ ಭಿನ್ನ ಭಿನ್ನ ರೂಪದಲ್ಲಿ, ಭಿನ್ನ-ಭಿನ್ನ ಪರಿಸ್ಥಿತಿಗಳಲ್ಲಿ ನಿಮ್ಮನ್ನು ತನ್ನ ಗ್ರಾಹಕರನ್ನಾಗಿ ಮಾಡಿಕೊಳ್ಳುತ್ತದೆ. ನಂತರ ಏನಾಗುತ್ತಿದ್ದೀರಿ? ಯೋಗಿಯಾಗುತ್ತಿದ್ದೀರಾ ಅಥವಾ ಯೋಧರಾಗುತ್ತಿದ್ದೀರಾ? ಯೋಧರಾಗಬಾರದು. ಪಕ್ಕಾ ಪ್ರತಿಜ್ಞೆ ಮಾಡಿದ್ದಿರಾ? ಅಥವಾ ಬಾಪ್‌ದಾದಾರವರು ಕೇಳುತ್ತಿದ್ದಾರೆ ಎಂದು ಹೌದು ಎಂದು ಹೇಳಿದ್ದೀರಾ? ಪಕ್ಕಾ ಮಾಡಿದ್ದಿರಾ? ಯಾವಾಗ ತಮ್ಮ ದೇಶಕ್ಕೆ ಹೋಗುತ್ತೀರೋ ಆಗ ಸ್ವಲ್ಪ ಸಡಿಲವಾಗುತ್ತದೆಯೇ? ಶಕ್ತಿಯರು ಏನು ಹೇಳುತ್ತೀರಿ? ಆಗುತ್ತೀರೋ ಅಥವಾ ಇಲ್ಲವೋ? ಎಲ್ಲರೂ ಹೌದು ಎಂದು ಹೇಳುತ್ತಿಲ್ಲ, ಎಂದರೆ ತಮ್ಮ ಮೇಲೆ ಇನ್ನೂ ಸಹ ಸ್ವಲ್ಪ ಸಂಶಯವಿದೆ (ಎಲ್ಲರೂ ಹೌದು ಬಾಬಾ ಎಂದರು) ನೋಡಿ ಟಿ.ವಿಯಲ್ಲಿ ಫೋಟೋ ತೆಗೆಯುತ್ತಿದ್ದಾರೆ! ನಂತರ ಬಾಪ್‌ದಾದಾರವರು ಟಿ.ವಿಯ ಕ್ಯಾಸೆಟ್ ಕಳಿಸುತ್ತಾರೆ ಏಕೆಂದರೆ ತಂದೆಗೆ ಪ್ರತಿಯೊಬ್ಬ ಮಗುವಿನೊಂದಿಗೆ- ಹೊಸಬರಾಗಲಿ ಅಥವಾ ಹಳೆಯವರಾಗಲಿ ಆದರೆ ಯಾರು ಹೃದಯದಿಂದ ನನ್ನ ಬಾಬಾ ಎಂದು ಹೇಳಿದರು. ಕೇವಲ ಹೇಳುವುದಲ್ಲ ಆದರೆ ತಿಳಿದುಕೊಂಡರು ಹಾಗೂ ಅದರಂತೆ ನಡೆದರು. ಅಂತಹ ಒಂದೊಂದು ಮಗುವಿನ ಜೊತೆ ಹೃದಯದ ಪ್ರೀತಿ ಇದೆ. ಕೇವಲ ಹೇಳುವಂತಹ ಪ್ರೀತಿಯಲ್ಲ.

ಬಾಪ್‌ದಾದಾರವರು ಬಹಳ ಮಕ್ಕಳ ಬಣ್ಣವನ್ನು( ಚಲನೆ, ವ್ಯವಹಾರ) ನೋಡುತ್ತಾರೆ- ಇಂದು ಬಾಬಾ, ಓ ನನ್ನ ಬಾಬಾ, ಓ ಮಧುರ ಬಾಬಾ, ಏನು ಹೇಳಲಿ, ಏನು ಹೇಳದಿರಲಿ..... ನೀವೇ ನನ್ನ ಸಂಸಾರವಾಗಿದ್ದೀರಿ ಎಂದು ಹೇಳುತ್ತಾರೆ. ಬಹಳ ಮಧುರ ಮಧುರ ಮಾತುಗಳನ್ನು ಆಡುತ್ತಾರೆ ಹಾಗೂ ಎರಡು ನಾಲ್ಕು ಗಂಟೆಯ ನಂತರ ಒಂದು ವೇಳೆ ಯಾವುದೇ ವಿಷಯ ಬಂದು ಬಿಟ್ಟರೆ ಭೂತ ಬಂದುಬಿಡುತ್ತದೆ. ಮಾತು ಬರುವುದಿಲ್ಲ, ಭೂತ ಬರುತ್ತದೆ, ಬಾಪ್‌ದಾದಾರವರ ಬಳಿ ಎಲ್ಲರ ಭೂತ ಬಂದಿರುವ ಸಮಯದ ಫೋಟೋ ಸಹ ಇದೆ. ನೋಡಿ ಭೂತನಾಥನ ಒಂದು ಸ್ಮೃತಿಚಿಹ್ನೆ ಸಹ ಇದೆ. ಎಂದ ಮೇಲೆ ಭೂತವನ್ನು ಸಹ ಬಾಪ್‌ದಾದಾರವರು ನೋಡುತ್ತಾರೆ- ಎಲ್ಲಿಂದ ಬಂತು, ಹೇಗೆ ಬಂತು ಹಾಗೂ ಹೇಗೆ ಓಡಿಸುತ್ತಿದ್ದೀರಿ. ಈ ಆಟವನ್ನು ಸಹ ನೋಡುತ್ತಾ ಇರುತ್ತಾರೆ. ಕೆಲವರಂತೂ ಗಾಬರಿಯಾಗಿ ಹೃದಯ ವಿಧೀರ್ಣರಾಗಿ (ಬಲಹೀನ, ದೌರ್ಬಲ್ಯ) ಹೋಗುತ್ತಾರೆ ನಂತರ ಬಾಪ್‌ದಾದಾರವರಿಗೆ ಈ ಶುಭ ಸಂಕಲ್ಪ ಬರುತ್ತದೆ ಇವರಿಗೆ ಯಾರ ಮುಖಾಂತರವಾದರೂ ಸಂಜೀವಿನಿ ಮೂಲಿಕೆಯನ್ನು ತಿನ್ನಿಸಿ ಎಚ್ಚರ ಮಾಡಿಸಬೇಕು ಎಂದು, ಆದರೆ ಅವರು ಮೂರ್ಚಿತ ಅವಸ್ಥೆಯಲ್ಲಿ ಎಷ್ಟು ಮಗ್ನರಾಗಿರುತ್ತಾರೆ ಎಂದರೆ ಸಂಜೀವಿನಿ ಮೂಲಿಕೆಯನ್ನು ನೋಡುವುದೇ ಇಲ್ಲ. ಈ ರೀತಿ ಮಾಡಬೇಡಿ. ಸಂಪೂರ್ಣ ಗಮನವನ್ನು ಕಳೆದುಕೊಳ್ಳಬೇಡಿ. ಸ್ವಲ್ಪ ಗಮನ ಇಟ್ಟುಕೊಳ್ಳಿರಿ. ಸ್ವಲ್ಪ ಗಮನವನ್ನು ಇಟ್ಟರೂ ಸಹ ರಕ್ಷಿಸಿಕೊಳ್ಳಬಹುದು.

ಇಂದು ವಿಶೇಷವಾಗಿ ಪ್ರತಿಯೊಂದು ಮಗುವಿನ ಫಲಿತಾಂಶವನ್ನು ನೋಡುತ್ತಿದ್ದಾರೆ. ಏಕೆಂದರೆ ಇದನ್ನು ಸ್ಮೃತಿ ದಿನೋತ್ಸವದಿಂದ ಸಮರ್ಥ ದಿನೋತ್ಸವ ಎನ್ನುತ್ತಾರೆ. ಬ್ರಹ್ಮಾತಂದೆ ಏನು ನೋಡುತ್ತಿದ್ದಾರೆ? ಎಷ್ಟೋ ಸಮರ್ಥ ದಿನೋತ್ಸವಗಳು ಆಚರಿಸಿಕೊಂಡಿದ್ದೀರಿ ಆದರೆ ಸದಾಕಾಲದ ಸಮರ್ಥತೆ ಎಲ್ಲಿಯವರೆಗೆ ಬಂದಿದೆ ಎಂದು. ಏನು ನೋಡಿದರು? ಈಗ ಫಲಿತಾಂಶದನುಸಾರವಾಗಿ ತಂದೆಯ ಜ್ಞಾನದಿಂದ ಜ್ಞಾನ ಸ್ವರೂಪವಾಗಿ ಎಷ್ಟು ಜನರಿದ್ದಾರೆ ಎಂದು ನೋಡಿದರು. ಮಾಯೆಯ ಜ್ಞಾನದಲ್ಲಿ ಕೂಡ ಜ್ಞಾನ ಸ್ವರೂಪರಾಗಬೇಕು ಅರ್ಥಾತ್ ಮಾಯೆಯನ್ನು ಕೂಡ ದೂರದಿಂದಲೇ ಗ್ರಹಿಸಬೇಕು. ಇಂದು ಯಾವುದೋ ಒಂದು ಪೇಪರ್ ಬರುತ್ತದೆ ಎಂದು ಮೊದಲೇ ತಿಳಿದುಕೊಳ್ಳುವುದರಿಂದ ಸಮರ್ಥವಾಗಿ

ಬಿಡುತ್ತೀರಿ. ಸಮಾಚಾರದಲ್ಲಿ ಏನು ಬರೆಯುತ್ತೀರಿ? ಮಾಯೆ ಬಂದಿತು, ಮಾಯೆಯನ್ನು ಹಿಮ್ಮೆಟ್ಟಿಸಿದೆವು, ಮತ್ತೆ ಹೆಮ್ಮೆಟ್ಟಿಸಿದೆವು ಆದರೆ ಏಕೆ ಬಂದಿದೆ ಎಂದು ಬರೆಯುತ್ತೀರಿ. ಆಗಾಗ ಬರುತ್ತಾ ಇರು ಎಂದು ಮಾಯಗೆ ಅವಕಾಶವನ್ನು ಕೊಡುತ್ತಿದ್ದೀರಾ? ಅವಕಾಶ ಕೊಡದೆ ಯಾರು ಬರುವುದಿಲ್ಲ. ಆದ್ದರಿಂದ ಅದನ್ನು ಬರಲು ಕೊಡುತ್ತಿದ್ದೀರಾ? ಅರ್ಧ ಕಲ್ಪದಿಂದ ಮಾಯೆ ಸಹಯೋಗಿ ಅಲ್ಲವೇ ಎಂದು ಯೋಚಿಸಿ ದಯೆಯನ್ನು ತೋರಿಸುತ್ತಿದ್ದೀರಾ? ಮಾಯೆಯ ಮೇಲೆ ದಯೆ ತೋರಿಸಬಾರದು. ಇಡೀ ವಿಶ್ವದಲ್ಲಿ ಇರುವ ಆತ್ಮರ ಮೇಲೆ ದಯೆಯನ್ನು ತೋರಿಸಿರಿ. ಆದ್ದರಿಂದ ಫಲಿತಾಂಶದಲ್ಲಿ ಮೊದಲ ನಂಬರ್‌ನಲ್ಲಿ ಮತ್ತು ಎರಡನೇ ನಂಬರ್‌ನಲ್ಲಿ 50-50ಪ್ರತಿಶತ ನೋಡಿದರು. ಕೇವಲ ಮೊದಲ ನಂಬರ್‌ನಲ್ಲಿ ಅಲ್ಲ ಮೊದಲ ನಂಬರ್ ಮತ್ತು ಎರಡನೇ ನಂಬರ್ ಎರಡರಲ್ಲಿ 50ಪ್ರತಿಶತ ನೋಡಿದರು. ಆದರೆ ಬಾಪ್‌ದಾದಾರವರಿಗೆ ಒಂದು ವಿಷಯದ ಬಗ್ಗೆ ಬಹಳ ಖುಷಿಯಾಗಿದೆ. ಮಕ್ಕಳು ತಂದೆಯ ಮೇಲಿನ ಸ್ನೇಹದಿಂದ ವಿಜಯಿಯಾಗಲೇಬೇಕು. ಈಗ ಎಲ್ಲರ ಮಸ್ತಕದಲ್ಲಿ ವಿಜಯೀ ತಿಲಕ ಎಷ್ಟು ಸ್ಪಷ್ಟವಾಗಿ ಕಾಣಿಸಬೇಕೆಂದರೆ ಇತರರು ಕೂಡ ಅನುಭವ ಮಾಡಿಕೊಳ್ಳಬೇಕು. ಇವರು ವಿಜಯ ರತ್ನಗಳು ಎಂದು.

ಬಾಪ್‌ದಾದಾರವರು ಮೊದಲು ಸಹ ತಿಳಿಸಿದ್ದರು ಈ ಅಂತಿಮ ವಿದ್ಯೆಯಲ್ಲಿ ಪ್ರತಿಯೊಂದು ಮಗುವೂ ಮೂರು ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು ಒಂದು ಸ್ವಯಂ, ಸ್ವಯಂನೊಂದಿಗೆ ಸಂತುಷ್ಟ- ಈ ಸರ್ಟಿಫಿಕೇಟ್ ಹಾಗೂ ಎರಡನೆಯದು ಬಾಪ್ ದಾದಾರವರ ಮೂಲಕ ಸರ್ಟಿಫಿಕೇಟ್ ಹಾಗೂ ಮೂರನೆಯದಾಗಿ ಸಂಬಂಧ ಸಂಪರ್ಕದಲ್ಲಿ ಬರುವವರ ಮೂಲಕ ಸರ್ಟಿಫಿಕೇಟ್. ಈ ಮೂರು ಸರ್ಟಿಫಿಕೇಟ್ ಯಾವಾಗ ಸಿಗುತ್ತದೆಯೋ ಆಗ ನಿಮ್ಮ ವಿದ್ಯೆ ಪೂರ್ಣವಾಯಿತು ಎಂದು ತಿಳಿದುಕೊಳ್ಳಿರಿ. ಬಾಪ್ ದಾದಾರವರಂತೂ ನಮ್ಮಿಂದ ಸಂತುಷ್ಟರಾಗಿದ್ದಾರೆ ಎಂದು ತಿಳಿದುಕೊಳ್ಳಬೇಡಿ. ಆದರೆ ಮೂರೂ ಸರ್ಟಿಫಿಕೇಟ್‌ಗಳು ಬೇಕಾಗಿವೆ, ಒಂದೇ ಅಲ್ಲ. ಹಾಗಾದರೆ ಪರಿಶೀಲನೆ ಮಾಡಿಕೊಳ್ಳಿರಿ. ಮೂರು ಸರ್ಟಿಫಿಕೇಟ್‌ಗಳಲ್ಲಿ ಎಷ್ಟು ಸರ್ಟಿಫಿಕೇಟ್ ಸಿಕ್ಕಿವೆ? ತಂದೆಯ ಹೊರತು ಏನು ಸಿಗುವುದಿಲ್ಲ. ಆದರೆ ಪರಿವಾರದ ಸಂತುಷ್ಟತೆಯ ಸರ್ಟಿಫಿಕೇಟ್ ಇದರಿಂದಲೂ ಸಹ ಬಹಳಷ್ಟು ಸಿಗುತ್ತದೆ. ಪರಿವಾರದಿಂದ ಎಷ್ಟು ಆತ್ಮರ ಸರ್ಟಿಫಿಕೇಟ್ ಯಾರಿಗೆ ಸಿಗುತ್ತದೆಯೋ, ಎಷ್ಟು ಬ್ರಾಹ್ಮಣರು ಸಂತುಷ್ಟರಾಗುತ್ತಾರೆಯೋ ಅಷ್ಟೇ ಭಕ್ತರು ನಿಮ್ಮ ಪೂಜೆಯನ್ನು ಸಂತುಷ್ಟತೆಯಿಂದ ಮಾಡುತ್ತಾರೆ, ಕಾಟಾಚಾರಕ್ಕಾಗಿ ಮಾಡುವುದಿಲ್ಲ. ಹೃದಯದಿಂದ ಮಾಡುತ್ತಾರೆ. ಹಾಗಾದರೆ ಬ್ರಾಹ್ಮಣ ಜೀವನದಲ್ಲಿ ಎಷ್ಟು ಬ್ರಾಹ್ಮಣರಿಗೆ ನಿಮ್ಮ ಪ್ರತಿ ಸ್ನೇಹ, ಸನ್ಮಾನ ಅರ್ಥಾತ್ ಗೌರವ(ರಿಗಾರ್ಡ್) ಇರುತ್ತದೆಯೋ, ಹೃದಯದ ಸಂತುಷ್ಟತೆಯಿರುತ್ತದೆಯೋ ಅಷ್ಟೇ ಪೂಜ್ಯರಾಗುತ್ತಾರೆ. ಪೂಜ್ಯರಾಗಲು ಸ್ನೇಹ ಹಾಗೂ ಗೌರವ ಇರಬೇಕು. ಅಂದ ಮೇಲೆ ಯಾವಾಗ ಜಡ ಚಿತ್ರಗಳ ಪೂಜೆಯಾಗುತ್ತದೆಯೋ ಆಗ ಅಷ್ಟೇ ಸ್ನೇಹ ಹಾಗೂ ಗೌರವ ಸಿಗುತ್ತದೆ. ಇಡೀ ಕಲ್ಪದ ಪ್ರಾಲಬ್ಧ ಈಗಲೇ ತಯಾರು ಮಾಡಿಕೊಳ್ಳಬೇಕು. ಕೇವಲ ಅರ್ಧ ಕಲ್ಪದ ರಾಜ್ಯದ ಪ್ರಾಲಬ್ಧವಷ್ಟೇ ಅಲ್ಲ. ಪೂಜ್ಯ ಪದವಿಯ ಪ್ರಾಲಬ್ಧವೂ ಸಹ ಈಗಲೇ ತಯಾರಾಗುತ್ತದೆ. ನಮ್ಮ ಕೆಲಸ ಕೇವಲ ತಂದೆಯಿಂದ ಆಗಿಬಿಡುತ್ತದೆ ಎಂದು ತಿಳಿಯಬೇಡಿರಿ. ಆದರೆ ತಂದೆಗೆ ಪರಿವಾರದ ಮೇಲೆ ಎಷ್ಟು ಪ್ರೀತಿ ಇದೆ! ಆದ್ದರಿಂದ ತಂದೆಯನ್ನು ಅನುಸರಿಸಿರಿ. ಬ್ರಹ್ಮಾತಂದೆಯನ್ನು ನೋಡಿರಿ. ಎಂತಹ ಮಗುವಾದರೂ ಕೂಡ ಶಿಕ್ಷಾದಾತನಾಗಿ ಶಿಕ್ಷಣ ಕೂಡ ಕೊಡುತ್ತಿದ್ದರು ಮತ್ತು ಶಿಕ್ಷಣದೊಂದಿಗೆ ಮನಸ್ಸಿನಲ್ಲಿ ಪ್ರೀತಿ

**ಕೂಡ ಇರುತ್ತಿತ್ತು. ಪ್ರೀತಿ ಎಂದರೆ ಕೇವಲ ಬಾಹುಗಳಿಂದ ಅಲ್ಲ ಆದರೆ ಪ್ರೀತಿಗೆ ಗುರುತು(ಚಿಹ್ನೆ) ತನ್ನ ಶುಭ ಭಾವನೆ, ಶುಭಕಾಮನೆಯಿಂದ ಎಂತಹ ಮಾಯೆಗೆ ವಶವಾಗಿರುವ ಆತ್ಮನನ್ನಾದರೂ ಪರಿವರ್ತನೆ ಮಾಡಬೇಕು. ಯಾರು ಹೇಗಿದ್ದರೂ ತಿರಸ್ಕಾರ ಭಾವನೆ ಬರಬಾರದು. ಇವರು ಬದಲಾಗುವುದಿಲ್ಲ ಇವರು ಅಷ್ಟೇ ಎನ್ನಬಾರದು. ಈಗ ದಯ ಹೃದಯಿಗಳಾಗಿ ಆಗುವ ಅವಶ್ಯಕತೆ ಇದೆ.** ಏಕೆಂದರೆ ಹಲವಾರು ಮಕ್ಕಳು ಬಲಹೀನರಾಗಿರುವ ಕಾರಣ ತಮ್ಮ ಶಕ್ತಿಯಿಂದ ಯಾವುದೇ ದೊಡ್ಡ ಸಮಸ್ಯೆಗಳನ್ನು ಪಾರು ಮಾಡಲು ಸಾಧ್ಯವಾಗುತ್ತಿಲ್ಲ, ಅಂದಮೇಲೆ ನೀವು ಅವರ ಸಹಯೋಗಿಗಳಾಗಿ, ಯಾವುದರಿಂದ? ಕೇವಲ ಶಿಕ್ಷಣದಿಂದಲ್ಲ, ಇತ್ತೀಚೆಗೆ ಶಿಕ್ಷಣ, ಪ್ರೀತಿಯ ಹೊರತು ಅಥವಾ ಶುಭ ಭಾವನೆ ಇಲ್ಲದೆ ಯಾರು ಸಹ ಕೇಳುವುದಿಲ್ಲ. ಇದಂತೂ ಅಂತಿಮ ಫಲಿತಾಂಶವಾಗಿದೆ. ಶಿಕ್ಷಣ ಕೆಲಸ ಮಾಡುವುದಿಲ್ಲ ಆದರೆ ಶಿಕ್ಷಣದ ಜೊತೆ ಶುಭ ಭಾವನೆ, ದಯಾ ಹೃದಯದ ಭಾವನೆ ಇದು ಸಹಜವಾಗಿ ಕೆಲಸ ಮಾಡುತ್ತದೆ. ಹೇಗೆ ಬ್ರಹ್ಮಾಬಾಬಾರವರವರನ್ನು ನೋಡಿದಿರಿ. ಈ ಮಗು ಇಂದು ತಪ್ಪು ಮಾಡಿದೆ ಎಂದು ತಿಳಿದಿದ್ದರೂ ಸಹ ಆ ಮಗುವಿಗೆ ವಿಧಾನದಿಂದ ಶಿಕ್ಷಣವನ್ನು ಕೊಟ್ಟು ಯುಕ್ತಿಯಿಂದ ಕೊಡುತ್ತಾ ನಂತರ ಅವರನ್ನು ಬಹಳ ಪ್ರೀತಿ ಮಾಡುತ್ತಿದ್ದರು, ಇದರಿಂದ ಅವರಿಗೆ ಅರಿವಾಗುತ್ತಿತ್ತು- ಬಾಬಾರವರ ಪ್ರೀತಿ ಇದೆ ಹಾಗೂ ಪ್ರೀತಿಯಲ್ಲಿ ತಪ್ಪಿನ ಅರಿವಿನ ಶಕ್ತಿ ಅವರಲ್ಲಿ ಬಂದುಬಿಡುತ್ತದೆ. ಹಾಗಾದರೆ ಬ್ರಹ್ಮಾತಂದೆಯನ್ನು ಇಂದು ಬಹಳ ನೆನಪು ಮಾಡಿದಿರಲ್ಲವೇ! ಎಂದ ಮೇಲೆ ಫಾಲೋ ಫಾದರ್ ಮಾಡಿ. ತಂದೆಯ ಸಮಾನರಾಗುವ ಸಾಹಸ(ಧೈರ್ಯ)ವಿದೆಯೇ? ಧೈರ್ಯಕ್ಕಾಗಿ ಶುಭಾಶಯಗಳು. ಬಾಪ್‌ದಾದಾರವರು ನಿಮ್ಮ ಹೃದಯದ ಚಪ್ಪಾಳೆಗಳನ್ನು ಮೊದಲೇ ಕೇಳಿಸಿಕೊಳ್ಳುತ್ತಾರೆ. ನೀವು ಖುಷಿಯ ಚಪ್ಪಾಳೆಯನ್ನು ಹೊಡೆಯುತ್ತೀರಿ ಆದರೆ ಬಾಬಾರವರಿಗೆ ಹೃದಯದ ಚಪ್ಪಾಳೆಗಳು ಮೊದಲೇ ತಲುಪುತ್ತದೆ.

ಬಾಪ್‌ದಾದಾರವರು ಸಹ ತಮಾಷೆಯ ಮಾತನ್ನು ಹೇಳುತ್ತಾರೆ. ಬ್ರಹ್ಮಾತಂದೆಯೊಂದಿಗೆ ಆತ್ಮಿಕ ವಾರ್ತಾಲಾಪ ನಡೆಯಿತು. ಬ್ರಹ್ಮಾತಂದೆ ಹೇಳುತ್ತಾರೆ- ನನಗೆ ಒಂದು ಮಾತಿನಿಂದ ಸಮಯ ಪ್ರಜ್ಞೆಯಿದೆ. ಮಕ್ಕಳಿಗಂತೂ ಹೇಳುತ್ತಾರೆ ಸಮಯದ ಅಭಿಮಾನಿಯಾಗಬೇಡಿ ಎಂದು ಆದರೆ ಬ್ರಹ್ಮಾಬಾಬಾರವರು ಒಂದು ಮಾತಿನಲ್ಲಿ ಸಮಯದ ಅಭಿಮಾನಿಯಾಗಿದ್ದಾರೆ, ಯಾವ ದಿನ? ಯಾವಾಗ ನನ್ನ ಒಂದೊಂದು ಮಾಗುವು ಜೀವನ್ಮುಕ್ತ ಸ್ಥಿತಿಯನ್ನು ಹೊಂದುತ್ತಾರೆ ಎಂದು! ಅಂತ್ಯದವರೆಗೆ ಜೀವನ್ ಮುಕ್ತರಾಗಿ ಬಿಡುವೆವು ಎಂದು ತಿಳಿಯಬೇಡಿ. ಇಲ್ಲ. ಬಹಳ ಕಾಲದಿಂದ ಜೀವನ್ ಮುಕ್ತ ಸ್ಥಿತಿಯ ಅಭ್ಯಾಸ, ಬಹಳ ಕಾಲದ ಜೀವನ ಮುಕ್ತ ರಾಜ್ಯ ಭಾಗ್ಯದ ಅಧಿಕಾರಿಯನ್ನಾಗಿ ಮಾಡುವುದು. ಅದರೆ ಮೊದಲು ಯಾವಾಗ ನೀವು ಇಲ್ಲಿ ಜೀವನ್ ಮುಕ್ತರಾಗುತ್ತೀರೋ ಆಗ ನಿಮ್ಮ ಜೀವನ್ಮುಕ್ತ ಸ್ಥಿತಿಯ ಪ್ರಭಾವ, ಜೀವನ ಬಂಧನದಲ್ಲಿರುವ ಆತ್ಮರ ಬಂಧನವನ್ನು ಸಮಾಪ್ತಿ ಮಾಡುವುದು. ಈ ಸೇವೆಯನ್ನು ಮಾಡುವುದಿಲ್ಲವೇ? ಮಾಡಬೇಕಲ್ಲವೇ! ಎಂದ ಮೇಲೆ ನೀವು ಬ್ರಹ್ಮಾತಂದೆಗೆ ಡೇಟ್ ಕಾನ್ಸಿಯಸ್‌ನ ಉತ್ತರವನ್ನು ಕೊಡಿ. ಎಲ್ಲರೂ ಜೀವನ್ ಮುಕ್ತರಾಗುವ ದಿನಾಂಕ ಎಂದು ಬರುವುದು? ಯಾವುದೇ ಬಂಧನವಿಲ್ಲ. ಬಂಧನಗಳ ಉದ್ದವಾದ ಲಿಸ್ಟ್ ಅನ್ನು ವರ್ಣನೆ ಮಾಡುತ್ತೀರಿ, ಕ್ಲಾಸ್‌ಗಳನ್ನು ಮಾಡುತ್ತೀರಿ ಎಂದರೆ ಬಂಧನಗಳ ದೊಡ್ಡ ಲಿಸ್ಟನ್ನು ತೆಗೆಯುತ್ತಿರಿ ಆದರೆ ಬಾಬಾರವರು ಹೇಳುತ್ತಾರೆ ಎಲ್ಲಾ ಬಂಧನಗಳಲ್ಲಿ ಮೊದಲನೆಯ ಬಂಧನವಾಗಿದೆ -ದೇಹಭಾನದ ಬಂಧನ. ಇದರಿಂದ ಮುಕ್ತರಾಗಿ. ದೇಹವಿಲ್ಲದಿದ್ದರೆ ಬೇರೆ ಎಲ್ಲಾ ಬಂಧನಗಳು ಸ್ವತಹವಾಗಿಯೇ ಸಮಾಪ್ತಿಯಾಗಿಬಿಡುತ್ತವೆ. ತನ್ನನ್ನು ವರ್ತಮಾನ ಸಮಯದಲ್ಲಿ ನಾನು ಶಿಕ್ಷಕಿಯಾಗಿದ್ದೇನೆ,

ವಿದ್ಯಾರ್ಥಿಯಾಗಿದ್ದೇನೆ, ನಾನು ಸೇವಾಧಾರಿಯಾಗುತ್ತೇನೆ ಈ ರೀತಿ ತಿಳಿದುಕೊಳ್ಳುವ ಬದಲಾಗಿ ಅಮೃತವೇಳೆಯಿಂದ ಈ ಅಭ್ಯಾಸವನ್ನು ಮಾಡಿ- "ನಾನು ಶ್ರೇಷ್ಠ ಆತ್ಮ, ಮೇಲಿನಿಂದ ಹಳೆಯ ಶರೀರದಲ್ಲಿ, ಈ ಹಳೆಯ ಪ್ರಪಂಚದಲ್ಲಿ, ಸೇವೆಗಾಗಿ ಬಂದಿದ್ದೇನೆ. ನಾನು ಆತ್ಮನಾಗಿದ್ದೇನೆ" - ಈ ಪಾಠವನ್ನು ಈಗ ಇನ್ನಷ್ಟು ಪಕ್ಕಾ ಮಾಡಿಕೊಳ್ಳಿರಿ. ನೀವು ಆತ್ಮನ ಭಾವವನ್ನು ಧಾರಣೆ ಮಾಡಿ ಆಗ ಈ ಆತ್ಮಿಕ ಭಾನ ಮಾಯೆಯ ಭಾನವನ್ನು ಸದಾ ಕಾಲಕ್ಕಾಗಿ ಸಮಾಪ್ತಿ ಮಾಡುವುದು. ಆದರೆ ಆತ್ಮನ ಭಾನ ಇದು ಈಗ ನಡೆದಾಡುತ್ತಾ, ಓಡಾಡುತ್ತ ಸ್ಮೃತಿಯಲ್ಲಿ ಇರಲಿ. ಇದು ಈಗ ಇನ್ನಷ್ಟು ಆಗಬೇಕು. ಬ್ರಹ್ಮಾಬಾಬಾರವರು ಆತ್ಮದ ಪಾಠವನ್ನು ಆದಿಯಿಂದ ಎಷ್ಟು ಪಕ್ಕಾ ಮಾಡಿದರು. ಪರಿವಾರದವರು ಸಹ ಆತ್ಮರಾಗಿದ್ದಾರೆ, ಗೋಡೆಗಳ ಮೇಲೆಯೂ ಸಹ "ನಾನು ಆತ್ಮನಾಗಿದ್ದೇನೆ", ನನ್ನ ಪರಿವಾರದವರು ಆತ್ಮರಾಗಿದ್ದಾರೆ" ಎಂದು ಒಬ್ಬೊಬ್ಬರ ಹೆಸರಿನಿಂದ ಗೋಡೆಗಳ ಮೇಲೆ ಈ ಪಾಠವನ್ನು ಪಕ್ಕಾ ಮಾಡಿಕೊಂಡರು. ಡೈರಿಗಳನ್ನು ತುಂಬಿಸಿದರು- ನಾನು ಆತ್ಮನಾಗಿದ್ದೇನೆ ಇವರು ಸಹ ಆತ್ಮರಾಗಿದ್ದಾರೆ. ಇವರು ಸಹ ಆತ್ಮರಾದ್ದಾರೆ. ನೀವು ಆತ್ಮದ ಪಾಠವನ್ನು ಇಷ್ಟು ಪಕ್ಕಾ ಮಾಡಿರುವಿರೇ? ನಾನು ಸೇವಾಧಾರಿಯಾಗಿದ್ದೇನೆ, ಈ ಪಾಠ ಸ್ವಲ್ಪ ಪಕ್ಕಾ ಎನಿಸುತ್ತಿದೆ ಆದರೆ ಆತ್ಮ ಸೇವಾಧಾರಿಯಾಗಿದ್ದೇನೆ ಎಂದಾಗ ಜೀವನ್ ಮುಕ್ತರಾಗಿಬಿಡುತ್ತೀರಿ. ಪ್ರತಿದಿನ ಶರೀರದಲ್ಲಿ ಮೇಲಿನಿಂದ ಬಂದು ಅವತರಿತನಾಗಿದ್ದೇನೆ, ನಾನು ಅವತರಿತ ಆತ್ಮನಾಗಿದ್ದೇನೆ, ಈ ಶರೀರದಲ್ಲಿ ಅವತರಿತ ಆತ್ಮನಾಗಿದ್ದೇನೆ, ಎಂದಾಗ ಯುದ್ಧ ಮಾಡಬೇಕಾಗಿ ಬರುವುದಿಲ್ಲ. ಆತ್ಮವಂತೂ ಬಿಂದು ಆಗಿದೆ ಅಲ್ಲವೇ? ಎಂದ ಮೇಲೆ ಎಲ್ಲಾ ಮಾತಿನಲ್ಲಿಯೂ ಸಹ ಬಿಂದುವನ್ನು ಇಡುವಿರಿ. ಎಂತಹ ಆತ್ಮನಾಗಿದ್ದೇನೆ? ಪ್ರತಿದಿನ ಒಂದು ಹೊಸ ಹೊಸ ಟೈಟಲ್‌ನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳಿರಿ. ನಿಮ್ಮ ಬಳಿ ಬಹಳಷ್ಟು ಟೈಟಲ್‌ಗಳ ಲಿಸ್ಟ್ ಇದೆ ಅಲ್ಲವೇ? ಪ್ರತಿದಿನ ಹೊಸ ಹೊಸ ಟೈಟಲ್ ಸ್ಮತಿಯಲ್ಲಿಟ್ಟುಕೊಳ್ಳಿ ನಾನು ಇಂತಹ ಶ್ರೇಷ್ಠ ಆತ್ಮನಾಗಿದ್ದೇನೆ ಎಂದು. ಇದು ಸಹಜ ಆಗಿದೆಯೋ ಅಥವಾ ಕಷ್ಟ ಎನಿಸುತ್ತದೆಯೋ? ಆತ್ಮ ಬಿಂದು ರೂಪದಲ್ಲಿ ಇರುತ್ತದೆ, ಎಂದ ಮೇಲೆ ಡ್ರಾಮಾ ಬಿಂದು ಸಹ ಕೆಲಸಕ್ಕೆ ಬರುವುದು ಹಾಗೂ ಸಮಸ್ಯೆಗಳಿಗೂ ಸೆಕೆಂಡಿನಲ್ಲಿ ಬಿಂದುವನ್ನು ಇಡಲು ಸಾಧ್ಯವಾಗುವುದು ಹಾಗೂ ಬಿಂದುವಾಗಿಯೇ ಪರಂಧಾಮಕ್ಕೆ ಹೋಗುವುದು. ಹೋಗಬೇಕೇ ಅಥವಾ ನೇರವಾಗಿ ಸ್ವರ್ಗದಲ್ಲಿ ಹೋಗಬೇಕೇ? ಎಲ್ಲಿಗೆ ಹೋಗುವಿರಿ? ಮೊದಲು ಮನೆಗೆ ಹೋಗುವಿರೇ ಅಥವಾ ರಾಜ್ಯಕ್ಕೆ ಹೋಗುವಿರೇ? ತಂದೆಯ ಜೊತೆ ಮನೆಯವರೆಗಂತೂ ಹೋಗಬೇಕಲ್ಲವೇ ಅಥವಾ ಸೀದಾ ರಾಜಧಾನಿಗೆ ಹೊರಟು ಹೋಗುತ್ತೀರಾ, ತಂದೆಯನ್ನು ಕೇಳುವುದಿಲ್ಲವೇ! ಎಂದಮೇಲೆ ಬಿಂದುವಾದ ತಂದೆಯ ಜೊತೆ ಬಿಂದುವಾಗಿ ಮೊದಲು ಮನೆಗೆ ಹೋಗಬೇಕು. ಇಲ್ಲವಾದರೆ ರಾಜ್ಯದ ಪಾಸ್ಪೋರ್ಟ್ ಸಿಗುವುದಿಲ್ಲ. ಪರಮಧಾಮದಿಂದ ರಾಜಧಾನಿಯಲ್ಲಿ ಹೋಗುವುದಕ್ಕಾಗಿ ಪಾಸ್ಪೋರ್ಟ್ ಆಟೋಮೆಟಿಕ್ ಸಿಗುತ್ತದೆ. ಯಾರೂ ಕೊಡುವ ಅವಶ್ಯಕತೆ ಇಲ್ಲ. ಎಷ್ಟು ಸಮೀಪ ಇರುವಿರೋ ಅಷ್ಟು ನಂಬರ್‌ವಾರ್‌ಆಗಿ ಪರಮಧಾಮದಿಂದ ರಾಜ್ಯದಲ್ಲಿ ಬರುವಿರಿ, ಪರಮಧಾಮದಿಂದ ಮೊದಲ ಆತ್ಮ ಯಾರು ಹೋಗುವರು? ಯಾರ ಜೊತೆ ಹೋಗುತ್ತಾರೆ? ಬ್ರಹ್ಮಾ ತಂದೆಯ ಜೊತೆಗೆ ಹೋಗುತ್ತೇವೆ! ಎಲ್ಲರೂ ರಾಜ್ಯದಲ್ಲಿಯೂ ಜೊತೆಯಲ್ಲಿಯೇ ಹೋಗುತ್ತೀರಾ ಅಥವಾ ನಂತರ ಎರಡನೆಯ, ಮೂರನೆಯ ಜನ್ಮದಲ್ಲಿ ಹೋಗುತ್ತೀರಾ? ಹೋಗಬೇಕಲ್ಲವೇ? ಪ್ರೀತಿ ಇದೆಯಲ್ಲವೇ? ಬ್ರಹ್ಮಾತಂದೆಯನ್ನು ಬಿಡುವುದಿಲ್ಲ ಅಲ್ಲವೇ, ಜೊತೆಯಾಗಿಯೇ ಹೋಗುತ್ತೀರಿ ಅಲ್ಲವೇ? ಎಂದ ಮೇಲೆ ಬಾಪ್‌ದಾದಾರವರಿಗೆ ಡೇಟ್ ಹೇಳುತ್ತೀರಾ ಅಥವಾ ಇಲ್ಲವೇ? (ಬಾಪ್‌ದಾದಾರವರೇ ಹೇಳಲಿ) ಬಾಪ್‌ದಾದಾರವರಂತೂ ಹೇಳುತ್ತಾರೆ ಈಗಲೇ

ಆಗಿಬಿಡಿ ಎಂದಮೇಲೆ ಬಾಬಾರವರು ಸಹ ಡೇಟ್ ಕಾನ್ಸಿಯಸ್‌ನಿಂದ ಬದಲಾವಣೆಯಾಗಿ ಬಿಡುತ್ತಾರೆ. ನೋಡಿ ಬ್ರಹ್ಮಾಬಾಬಾರವರು ನಾಳೆಯನ್ನು ನೋಡಿದರೆ? ತಕ್ಷಣ ದಾನ ಮಹಾದಾನ ಮಾಡಿದರು. ತೀವ್ರ ಪುರುಷಾರ್ಥ, ಮೊದಲನಂಬರಿನ ಪುರುಷಾರ್ಥ ಮಾಡಿದರು. ನಾಳೆಯನ್ನು ನೋಡಲಿಲ್ಲ. ನಾಳೆ ಏನಾಗುವುದು! ಪರಿವಾರ ಹೇಗೆ ನಡೆಯುವುದು! ಈ ರೀತಿ ಯೋಚಿಸಿದರೇ? ಏನು ಇಂದು ನಡೆಯುತ್ತಿದೆ, ಅದು ಒಳ್ಳೆಯದೇ ನಡೆಯುತ್ತಿದೆ ಹಾಗೂ ನಾಳೆ ಏನು ನಡೆಯುವುದೋ ಅದು ಸಹ ಒಳ್ಳೆಯದೇ ಆಗಿದೆ. ತಕ್ಷಣ ದಾನಮಾಡಿ ಮಹಾಪುಣ್ಯವನ್ನು ಸಂಪಾದಿಸಿಕೊಂಡರು. ಹಾಗೂ ಮೊದಲ ನಂಬರಿನ ಮಹಾನ್ ಆದರು. ಈಗ ಮಕ್ಕಳು ತಕ್ಷಣ ದಾನಿಯಾಗಬೇಕು. ಸಂಕಲ್ಪ ಮಾಡಿ ಹಾಗೂ ತಕ್ಷಣ ದಾನಿ ಮಹಾದಾನಿಯಾಗಿರಿ. ಯಾವಾಗ ಕೈ ಎತ್ತುತ್ತಿರಿ- ಮೊದಲ ಡಿವಿಜನ್ ನಲ್ಲಿ ಯಾರು ಬರುತ್ತಿರಿ ಎಂದು ಕೇಳಿದಾಗ? ಆಗ ಎಲ್ಲರೂ ಕೈ ಎತ್ತುತ್ತಾರೆ. ಈಗಲೂ ಕೇಳಿದರೆ ಎಲ್ಲರೂ ಕೈ ಎತ್ತುತ್ತಾರೆ. ಬಾಪ್‌ದಾದಾರವರು ತಿಳಿದುಕೊಂಡಿದ್ದಾರೆ ಯಾವುದೇ ಕೈ ಕೆಳಗೆ ಇರುವುದಿಲ್ಲ.  ಮೊದಲ ಡಿವಿಜನ್ ನಲ್ಲಿ ಬರಬೇಕೆಂದರೆ ಮೊದಲ ನಂಬರಿನವರನ್ನು ಫಾಲೋ ಮಾಡಬೇಕು. ಫಾಲೋ ಮಾಡುವುದು ಸಹಜವಾಗಿದೆ- ಕೇವಲ ಬ್ರಹ್ಮಾತಂದೆಯ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಡಿ, ಕಾಪಿ ಮಾಡಿ. ಕಾಪಿ ಮಾಡುವುದು ಬರುತತ್ತದೆಯಲ್ಲವೇ ಅಥವಾ ಇಲ್ಲವೇ! ಫಾಲೋ ಮಾಡಲು ಬರುತ್ತದೆಯೇ? ಎಂದ ಮೇಲೆ ಫಾಲೋ ಮಾಡಿ. ಮತ್ತೇನು ಮಾಡಬೇಕು! ವಿಶಾಲ ಸಭೆಯನ್ನು ನೋಡಿ ಖುಷಿಪಡುತ್ತಿದ್ದೀರಲ್ಲವೇ? (ಎಲ್ಲರೂ ಗಟ್ಟಿಯಾಗಿ ಚಪ್ಪಾಳೆಯನ್ನು ಹೊಡೆದರು) ಎಲ್ಲರಿಗೆ ಒಂದು ಕೈಯಿಂದ ಚಪ್ಪಾಳೆಯನ್ನು ಹೊಡೆಯಲು ಕಲಿಸಿರಿ. (ಎಲ್ಲರೂ ಒಂದು ಕೈಯನ್ನು ಅಲುಗಾಡಿಸಿದರು) ಇದು ಚೆನ್ನಾಗಿದೆ. ಒಳ್ಳೆಯದು. ಈಗ ಯಾರಾದರೆ ಇಲ್ಲಿ ಕುಳಿತಿರುವಿರೋ ಅವರು ಒಂದು ಕ್ಷಣದಲ್ಲಿ ಅಶರೀರಿ ಆತ್ಮಿಕ ಸ್ಥಿತಿಯಲ್ಲಿ ಸ್ಥಿತರಾಗಿರಿ. ಶರೀರದ ಅಭಿಮಾನದಲ್ಲಿ ಬರಬಾರದು. ಆತ್ಮ ಪರಮಾತ್ಮನೊಂದಿಗೆ ಮಿಲನ ಆಚರಿಸಿಕೊಳ್ಳುತ್ತಿದೆ ಎಂದು ಅನುಭವವನ್ನು ಮಾಡಿಕೊಳ್ಳಿರಿ. (ಬಾಪ್‌ದಾದಾ ಈ ವ್ಯಾಯಾಮವನ್ನು ಮಾಡಿಸಿದರು) ಈ ಅಭ್ಯಾಸ ಮಾತು ಮಾತಿಗೆ ಕರ್ಮ ಮಾಡುತ್ತಲೂ ಕೂಡ ಮಾಡುತ್ತಾ ಇರಿ. ಸ್ವಿಚ್ ಆನ್ ಮಾಡಿದಾಕ್ಷಣ ಆಶರೀರಿ ಆಗಬೇಕು. ಈ ಅಭ್ಯಾಸ ಕರ್ಮಾತೀತ ಸ್ಥಿತಿಯ ಅನುಭವವನ್ನು ಮಾಡಿಸುತ್ತದೆ.

**ನಾಲ್ಕಾರು ಕಡೆಯ ಸದಾ ಸಮರ್ಥ ಆತ್ಮರಿಗೆ, ಸದಾ ಬಾಪ್‌ದಾದಾರವರನ್ನು ಫಾಲೋ ಮಾಡುವಂತಹ ಸಹಜ ಪುರುಷಾರ್ಥಿ ಮಕ್ಕಳಿಗೆ, ಸದಾ ಒಬ್ಬ ತಂದೆ, ಏಕಾಗ್ರ ಬುದ್ಧಿ, ಏಕರಸ ಸ್ಥಿತಿಯಲ್ಲಿ ಸ್ಥಿತರಾಗುವಂತಹ, ಬಿಂದುವಾಗಿ ಬಿಂದು ತಂದೆಯ ಜೊತೆಯಲ್ಲಿ ನಡೆಯುವಂತಹ ಸರ್ವ ತಂದೆಯ ಸ್ನೇಹಿ, ಸಹಯೋಗಿ, ಸೇವಾಧಾರಿ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗು ನಮಸ್ತೆ.**

ರಿವೈಸ್ ಕೋರ್ಸ್ 18-01-1997.

***ತಮ್ಮ ಚಹರೆಯಿಂದ ತಂದೆಯ ಲಕ್ಷಣಗಳನ್ನು ಪ್ರತ್ಯಕ್ಷ ಮಾಡಿರಿ. ಆಗ ಪ್ರತ್ಯಕ್ಷತೆಯ ನಗಾರಿ ಮೊಳಗುವುದು.***

ಎಲ್ಲರ ಹೃದಯದಲ್ಲಿ ನನ್ನ ಬಾಬಾ ಬಂದುಬಿಟ್ಟಿದ್ದಾರೆ, ನನ್ನ ತಂದೆ ಎಂಬ ಶಬ್ದ ಮೊಳಗಬೇಕು. ಬ್ರಹ್ಮಕುಮಾರಿಯರ ಬಾಬಾ ಅಲ್ಲ. ನನ್ನ ಬಾಬಾ, ಯಾವಾಗ ಎಲ್ಲರ ಹೃದಯದಿಂದ ನನ್ನ ಬಾಬ ಎಂಬ ಕೂಗು ಹೊರ ಬರುತ್ತದೆಯೋ ಆಗಲೇ ಈ ಕೂಗು ನಾಲ್ಕಾರು ಕಡೆ ನಗಾರಿಯಂತೆ ಮೊಳಗುವುದು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಯಾರು ನನ್ನನ್ನು ನೋಡಿದರೂ, ಸಂಬಂಧ ಸಂಪರ್ಕದಲ್ಲಿ ಬಂದರೂ ನನ್ನಲ್ಲಿ ತಂದೆಯನ್ನು ನೋಡುತ್ತಿದ್ದಾರೆ.

2. ನಾನು ವಿಶ್ವಾತ್ಮರು ಬೇಹದ್ ತಂದೆ, ಬೇಹದ್ ಮಾಲಿಕನಿಂದ, ಬೇಹದ್ ವಾರಸತ್ವವಕ್ಕೆ (ಮುಕ್ತಿ, ಜೀವನ್ ಮುಕ್ತಿ) ಅಧಿಕಾರರಾಗಬೇಕೆಂಬ ಶುಭಕಾಮನೆ, ಶುಭ ಭಾವನೆ ಇರುವ ದಯಾಹೃದಯೀ ಸ್ವರೂಪ.

3. ನಾನು ನಿರಂತರ ಯೋಗಿ. (ಯುದ್ಧ ಮಾಡುವ ವೀರನಲ್ಲ).

4. ನಾನು ಏಕೆ, ಏನು, ಹೀಗೆ, ಹಾಗೆ ಎಂಬ ಶಬ್ದಗಳನ್ನು ಸಮಾಪ್ತಿ ಮಾಡಿ ನನ್ನ ಮತ್ತು ಇತರರ ಮಾಯೆಯನ್ನು ಸಮಾಪ್ತಿ ಮಾಡಿರುವ ಸಮರ್ಥ ಸ್ವರೂಪ.

5. ನಾನು ಏಕೆ, ಏನು, ಹೀಗೆ ಹಾಗೆ ಎಂಬ ಪ್ರಶ್ನೆಗಳನ್ನು ಸಮಾಪ್ತಿ ಮಾಡಿ ಬಿಂದುವನ್ನು ಇಟ್ಟು ಸಮರ್ಥ ಖಾತೆಯನ್ನು ತಯಾರು ಮಾಡಿಕೊಂಡಿರುವ ಸಮರ್ಥಯೋಗಿ.

6. ನಾನು ಹೃದಯದಿಂದ ನನ್ನ ತಂದೆ ಎಂದು, ಒಪ್ಪಿಕೊಂಡು( ಅಂಗೀಕರಿಸಿ) ನಡೆಯುತ್ತಿದ್ದೇನೆ.

7. ನಾನು ಜ್ಞಾನ ಮತ್ತು ಮಾಯೆಯ ಜ್ಞಾನದಲ್ಲಿ ಕೂಡ ಜ್ಞಾನಸ್ವರೂಪವಾಗಿ ಮಾಯೆಯನ್ನು ದೂರದಿಂದಲೇ ಗ್ರಹಿಸಿ ಹಿಮ್ಮೆಟ್ಟುವ ಸಮರ್ಥ ಸ್ವರೂಪ.

8. ನನ್ನ ಮಸ್ತಕದಲ್ಲಿರುವ ವಿಜಯೀ ತಿಲಕದಿಂದ ನಾನು ವಿಜಯೀ ರತ್ನ ಎಂಬ ಅನುಭವವನ್ನು ಎಲ್ಲರೂ ಮಾಡಿದ್ದಾರೆ.

9. ನನಗೆ ಈ ವಿದ್ಯೆಯಲ್ಲಿ ಸ್ವಯಂನ ಸಂತುಷ್ಟತೆಯ ಸರ್ಟಿಫಿಕೇಟ್, ಬಾಪ್‌ದಾದಾರವರಿಂದ ಸರ್ಟಿಫಿಕೇಟ್, ಸಂಬಂಧ ಸಂಪರ್ಕದಲ್ಲಿ ಬರುವವರಿಂದ,(ಪರಿವಾರದಿಂದ) ಸರ್ಟಿಫಿಕೇಟ್ ಲಭಿಸಿದೆ.

10. ಬ್ರಾಹ್ಮಣ ಜೀವನದಲ್ಲಿ ಬ್ರಾಹ್ಮಣ ಆತ್ಮರು ನನ್ನ ಪ್ರತಿ ಸ್ನೇಹ, ಗೌರವ ಮತ್ತು ಹೃದಯದಿಂದ ಸಂತುಷ್ಟರಾಗಿದ್ದಾರೆ ಮತ್ತು ಅರ್ಧ ಕಲ್ಪ ಭಕ್ತರು ಕೂಡ ಪೂಜ್ಯಾತ್ಮನಾದ ನನ್ನ ಪೂಜೆಯನ್ನು ಹೃದಯದಿಂದ ಮಾಡುತ್ತಿದ್ದಾರೆ.

11. ನಾನು ಬ್ರಹ್ಮಾ ತಂದೆಯ ಸಮಾನವಾಗಿ ಎಂತಹ ಆತ್ಮನನ್ನಾದರೂ ಶಿಕ್ಷದಾತನಾಗಿ ಶಿಕ್ಷಣವನ್ನು ಕೊಡುತ್ತೇನೆ ಮತ್ತು ಶಿಕ್ಷಣದೊಂದಿಗೆ ಮನಸ್ಸಿನಲ್ಲಿ ಶುಭ ಭಾವನೆ, ಶುಭಕಾಮನೆಯಿಂದ ಎಂತಹ ಮಾಯೆಗೆ ವಶವಾದ ಆತ್ಮರನ್ನು ಕೂಡ ಪರಿವರ್ತನೆ ಮಾಡುವ ದಯಾ ಹೃದಯ ಸ್ವರೂಪ.

12. ನನ್ನ ಜೀವನ್ ಮುಕ್ತಿ ಸ್ಥಿತಿಯಿಂದ ಜೀವನ್ ಬಂಧನ ಆತ್ಮರ ಬಂಧನವನ್ನು ಸಮಾಪ್ತಿ ಮಾಡಿದ್ದೇನೆ.

13. ನಾನು ಅಮೃತ ವೇಳೆಯಿಂದ "ನಾನು ಶ್ರೇಷ್ಠ ಆತ್ಮ, ಮೇಲಿಂದ ಕೆಳಕ್ಕೆ ಹಳೆಯ ಶರೀರದಲ್ಲಿ ಹಳೆಯ ಪ್ರಪಂಚದಲ್ಲಿ ಸೇವೆಗಾಗಿ ಅವತರಿತನಾಗಿದ್ದೇನೆ" ಎಂಬ ಅಭ್ಯಾಸವನ್ನು ಮಾಡುತ್ತಿದ್ದೇನೆ.

14. "ನಾನು ಆತ್ಮ" ಈ ಪಾಠವನ್ನು ದೃಢವಾಗಿ ಮಾಡಿಕೊಂಡು ನಡೆದಾಡುತ್ತಾ, ತಿರುಗಾಡುತ್ತಾ ಆತ್ಮ ಅಭಿಮಾನಿ ಸ್ಥಿತಿ ಮತ್ತು ಸ್ಮೃತಿಯಲ್ಲಿದ್ದೇನೆ.

15. ನಾನು ತಂದೆಯ ಸಮಾನವಾದ ತಕ್ಷಣದಾನಿ ಮಹಾದಾನಿ ಮಗು ಎಂಬ ಪಾಠವನ್ನು ಪಕ್ಕಾ ಮಾಡಿಕೊಂಡಿದ್ದೇನೆ.

16. ನಾನು ಅವತಾರ, ಪ್ರತಿ ದಿನವೂ ಶರೀರದಲ್ಲಿ ಮೇಲಿನಿಂದ ಸೇವೆಗಾಗಿ ಅವತರಿಸಿರುವ ಆತ್ಮ ಎಂದು ಭಾವಿಸುವುದರಿಂದ ಎಲ್ಲಾ ವಿಷಯಗಳಲ್ಲಿ ಸಹಜವಾಗಿ ಬಿಂದುವನ್ನು ಇಡುತ್ತಿದ್ದೇನೆ.

17. ನಾನು ಶ್ರೇಷ್ಠಾತ್ಮ ಎಂದು ದಿನವೂ ಒಂದು ಹೊಸ ಹೊಸ ಟೈಟಲ್ ಅನ್ನು ಸ್ಮೃತಿಯಲ್ಲಿಟ್ಟುಕೊಳ್ಳುತ್ತೇನೆ.

18. ನಾನು ಬಿಂದು ತಂದೆಯೊಂದಿಗೆ ಬಿಂದುವಾಗಿ ಮೊದಲು ಮನೆಗೆ (ಪರಂಧಾಮ) ಹೋಗಿ ನಂತರ ರಾಜ್ಯದಲ್ಲಿ ಬರುತ್ತೇನೆ.

19. ನಾನು ಬ್ರಹ್ಮಾ ತಂದೆಯ ಸಮಾನವಾದ ತಕ್ಷಣ ದಾನಿ ಮಹಾ ಪುಣ್ಯಾತ್ಮ ಮತ್ತು ಮೊದಲ ನಂಬರ್ ನಲ್ಲಿ ಬರುವ ತೀವ್ರಪುರುಷಾರ್ಥಿಯಾಗಿದ್ದೇನೆ.

20. ನಾನು ಒಂದು ಕ್ಷಣದಲ್ಲಿ ಅಶರೀರಿ ಆತ್ಮಿಕ ಸ್ಥಿತಿಯಲ್ಲಿರುವ ಅಭ್ಯಾಸವನ್ನು ಮಾತು ಮಾತಿಗೆ ಕರ್ಮ ಮಾಡುವ ಸಮಯದಲ್ಲಿ ಮಾಡಿ ಕರ್ಮಾತೀತ ಸ್ಥಿತಿಯನ್ನು ಅನುಭವ ಮಾಡಿದ್ದೇನೆ.